# ಹೋಮಿಯೋಕೇರ್ ಇಂಟರ್‌ನ್ಯಾಷನಲ್‌ನಲ್ಲಿ 'ಹಾರ್ಮೋನಲ್ ಅಸಮತೋಲನತೆ' ಸಮಸ್ಯೆಗೆ ಪರಿಣಾಮಕಾರಿ ಚಿಕಿತ್ಸೆ ಲಭ್ಯವಿದೆ

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೊಕೇರ್ ಇಂಟರ್‌ನ್ಯಾಷನಲ್



**ಹಾರ್ಮೋನಲ್ ಅಸಮತೋಲನತೆ ಕಾರಣದಿಂದಾಗಿ ವಿವಿಧ ದೈಹಿಕ ಸಮಸ್ಯೆಗಳು, ಅಸ್ವಸ್ಥತೆಗಳು ಮತ್ತು ಥೈರಾಯ್ಡ್, ಪಿಸಿಓಡಿ, ಬಂಜೆತನ ಹಾಗೂ ಮಧುಮೇಹ ರೀತಿಯ ಕಾಯಿಲೆಗಳು ಕಾಣಿಸಿಕೊಳ್ಳುತ್ತವೆ. ನಿರ್ದಿಷ್ಟ ಹಾರ್ಮೋನ್‌ಗಳ ಅಧಿಕ ಅಥವಾ ಕನಿಷ್ಠ ಪ್ರಮಾಣದ ಅಸಹಜ ಮಟ್ಟಗಳಿಂದಾಗಿ ಬಹು ಅಂಗಾಂಗ ವ್ಯವಸ್ಥೆಗಳ ಮೇಲೆ ಪರಿಣಾಮ ಉಂಟಾಗುತ್ತವೆ. ಈ ಕುರಿತಂತೆ ಎಷ್ಟು ಚೆನ್ನಾಗಿ ನಾವು ಅರಿತುಕೊಂಡಿರುತ್ತೇವೊ, ಅಷ್ಟು ಮುಂದೆ ಎದುರಾಗಬಹುದಾದ ಚಿಕಿತ್ಸಾ ಸಂಕೀರ್ಣತೆಗಳಿಂದ ಬಚಾವಾಗಲು ನೆರವಾಗುತ್ತದೆ.**

**ಪ್ರಮುಖ 9 ಗ್ರಂಥಿಗಳನ್ನು ಒಳಗೊಂಡಿರುವ ಎಂಡೋಕ್ರೈನ್ ವ್ಯವಸ್ಥೆಯು, ರಸಾಯನಿಕ ಸಂದೇಶವಾಹಕಗಳಂತೆ ವರ್ತಿಸುವ ಹಾರ್ಮೋನ್‌ಗಳ ಮುಖಾಂತರ ದೇಹದ ನಿಯಂತ್ರಕ ಕ್ರಿಯೆಗಳನ್ನು ನಿಯಂತ್ರಿಸುತ್ತದೆ. ಎಂಡೋಕ್ರೈನ್ ವ್ಯವಸ್ಥೆಯು ದೇಹದ ಅಂಗಾಂಗಗಳು ಮತ್ತು ಅಂಗಾಂಶಗಳೊಂದಿಗೆ ಸಂವಹಿಸುತ್ತ, ಸಮಗ್ರ ಆರೋಗ್ಯ ಮತ್ತು ಉತ್ತಮ ಸ್ವಾಸ್ಥ್ಯಕ್ಕೆ ತನ್ನದೇ ಆದ ಕೊಡುಗೆಗಳನ್ನು ನೀಡುತ್ತದೆ. ಇಂತಹ ಎಂಡೋಕ್ರೈನ್ ವ್ಯವಸ್ಥೆಯ ಅಸ್ವಸ್ಥತೆಗಳು ವಿಭಿನ್ನವಾಗಿರುತ್ತವೆ ಮತ್ತು ದೇಹದ ವಿವಿಧ ಅಂಗಾಂಗಳ ಮೇಲೆ ಪರಿಣಾಮ ಬೀರುತ್ತವೆ.**

## ವಿವಿಧ ರೀತಿಯ ಹಾರ್ಮೋನಲ್ ಅಸ್ವಸ್ಥತೆಗಳು:




**ಥೈರಾಯ್ಡ್ ಕಾಯಿಲೆಗಳು:** ಥೈರಾಯ್ಡ್ ಹಾರ್ಮೋನ್‌ಗಳು ದೇಹದಲ್ಲಿನ ಪ್ರತಿಯೊಂದು ಅಂಗಾಂಶಗಳ ಮೇಲೆ, ಮೆಟಾಬೊಲಿಕ್ ಕಂಟ್ರೋಲಿಂಗ್ ಮಟ್ಟದ ಮೇಲೆ ಮತ್ತು ಇನ್ನಿತರೆ ಪ್ರಮುಖ ಕ್ರಿಯೆಗಳ ನಿಯಂತ್ರಣದ ಮೇಲೆ ಅಪ್ರತ್ಯಕ್ಷವಾಗಿ ಪರಿಣಾಮ ಬೀರುತ್ತವೆ. ಹೈಪೊಥೈರಾಯ್ಡಿಸಂ ವಿವರಣೆಯಿಂದ ಇಂತಹ ಹಾರ್ಮೋನ್ ಉತ್ಪಾದನೆಯಲ್ಲಿ ಕೊರತೆ ಉಂಟಾಗಿದೆ ಎಂಬುದು ತಿಳಿಯುತ್ತದೆ ಮತ್ತು ಇದರಿಂದಾಗಿ ಮೆಟಾಬೊಲಿಸಂ ಕುಂಠಿತ ಗೊಳ್ಳುತ್ತದೆ. ಸಾಮಾನ್ಯವಾಗಿ ಬಳಲಿಕೆ, ಶೀತದ ಅನುಭವ, ತೂಕ ಹೆಚ್ಚಳ, ಮಲಬದ್ದತೆ ಮತ್ತು ಚರ್ಮ ಒಣಗುವುದು ಇದರ ಲಕ್ಷಣಗಳಾಗಿರುತ್ತವೆ. ಹೈಪರ್‌ಥೈರಾಯ್ಡಿಸಂನಲ್ಲಿ ಇದಕ್ಕೆ ತದ್ವಿರುದ್ಧವಾದ ಸ್ಥಿತಿಗಳು ಗೋಚರಿಸುತ್ತವೆ. ಥೈರಾಯ್ಡ್ ಹಾರ್ಮೋನ್‌ಗಳು ಅಧಿಕವಾಗಿ ಉತ್ಪನ್ನಗೊಂಡಾಗ ದೇಹದ ಮೆಟಾಬೊಲಿಸಂ ಅಧಿಕಗೊಳ್ಳುತ್ತದೆ, ಇದರಿಂದಾಗಿಯೆ ಅಧಿಕಶಾಖ, ದುರ್ಬಲತೆ, ತೂಕ ಹಾನಿ, ಡಯೇರಿಯಾ ಮತ್ತು ನಿದ್ರಾ ಸಮಸ್ಯೆ ಉಂಟಾಗುತ್ತವೆ.

**ಪ್ಯಾನ್‌ಕ್ರಿಯಾಟಿಕ್ ಅಸ್ವಸ್ಥತೆಗಳು:** ಡಯಾಬೆಟಿಸ್ ಮೆಲ್ಲಿಟಸ್ ಎಂಬುದೊಂದು ಮಲ್ಟಿಫೇಸೆಟೆಡ್ ಸಂಕೀರ್ಣ ಅಸ್ವಸ್ಥತೆಯಾಗಿದೆ. ಇದರ ಪ್ರಾಥಮಿಕ ಹಂತದ ರೂಪಗಳನ್ನು ಟೈಪ್ 1 ಮತ್ತು ಟೈಪ್ 2 ಎನ್ನಲಾಗುತ್ತದೆ. ಪ್ಯಾನ್‌ಕ್ರಿಯಾಗಳಲ್ಲಿ ತಯಾರಾಗುವ ಬ್ಲಡ್-ಶುಗರ್-ಲೋವರಿಂಗ್ ಹಾರ್ಮೋನ್ ಇನ್ಸುಲಿನ್ ಅನ್ನು ಉತ್ಪಾದಿಸುವ ಅಥವಾ ಉಪಯೋಗಿಸಿಕೊಳ್ಳುವ ಅಸಾಮರ್ಥ್ಯತೆಯಿಂದಾಗಿ ಈ ಕಾಯಿಲೆ ಉಂಟಾಗುತ್ತದೆ. ಡಯಾಬೆಟಸ್‌ನ ಸಂಭವನೀಯ ಕುರುಹುಗಳು ಮತ್ತು ಲಕ್ಷಣಗಳಲ್ಲಿ ಅಧಿಕ ರಕ್ತ ಮತ್ತು ಮೂತ್ರ ಸಕ್ಕರೆ ಮಟ್ಟಗಳು, ಪದೇ ಪದೇ ಮೂತ್ರ ವಿಸರ್ಜನೆ, ಕುಂದಿದ ದೃಷ್ಟಿ, ಡಿಸ್‌ಒರಿಯಂಟೇಶನ್ ಮತ್ತು ಟಿಂಗ್ಲಿಂಗ್ ಸೆನ್ಸೇಶನ್‌ನಂತಹ ಲಕ್ಷಣಗಳೂ ಒಳಗೊಂಡಿರುತ್ತವೆ.

**ಪಿಟ್ಯುಟರಿ ಮತ್ತು ಹೈಪೊಥಲಾಮಸ್ ಅಸ್ವಸ್ಥತೆಗಳು:** ವಿವಿಧ ಹಾರ್ಮೋನ್‌ಗಳು ಪಿಟ್ಯುಟರಿ ಗ್ರಂಥಿಯಲ್ಲಿ ಉತ್ಪನ್ನವಾಗುತ್ತವೆ ಮತ್ತು ಪಕ್ಕದಲ್ಲಿಯೇ ಇರುವ ಹೈಪೊಥಲಾಮಸ್ ಗ್ರಂಥಿಯಿಂದ ಇವುಗಳ ಬಿಡುಗಡೆಯು ನಿಯಂತ್ರಿಸಲ್ಪಡುತ್ತದೆ. ಪಿಟ್ಯುಟರಿ ಹಾರ್ಮೋನ್ಸ್ ಮತ್ತು ಸಂಬಂಧಿತ ಕಾಯಿಲೆಗಳಿಗೆ ಕೆಲವು ಉದಾಹರಣೆಗಳನ್ನು ನೀಡಬಹುದಾಗಿದೆ, ಆ್ಯಂಟಿಡೈಯುರೆಟಿಕ್ ಹಾರ್ಮೋನ್ (**ಎಡಿಎಚ್**) ಎಂಬುದು ದೇಹದ ದ್ರವ ಮಟ್ಟಗಳನ್ನು ನಿಯಂತ್ರಿಸುತ್ತದೆ ಮತ್ತು ಡಯಾಬೆಟಿಸ್ ಇನ್ಸಿಪಿಡಸ್‌ಗೆ ಕಾರಣವಾಗುತ್ತದೆ; ಗ್ರೋಥ್ ಹಾರ್ಮೋನ್ (**ಜಿಎಚ್**) ಮಕ್ಕಳಲ್ಲಿನ ಆರೋಗ್ಯಕರ ಬೆಳವಣಿಗೆಯನ್ನು ನಿಯಂತ್ರಿಸುತ್ತದೆ; ಥೈರಾಯ್ಡ್ ಸ್ಟಿಮ್ಯುಲೇಟಿಂಗ್ ಹಾರ್ಮೋನ್ (**ಟಿಎಸ್‌ಎಚ್**) ಎಂಬುದು ಥೈರಾಯ್ಡ್ ಹಾರ್ಮೋನ್ ಉತ್ಪಾದನೆಯನ್ನು ಪ್ರೇರೆಪಿಸುತ್ತದೆ.

**ಓವರಿಯಾನ್ ಮತ್ತು ಟೆಸ್ಟಿಕ್ಯೂಲಾರ್ ಅಸ್ವಸ್ಥತೆಗಳು:** ಪುರುಷರಲ್ಲಿ ಟೆಸ್ಟಿಸ್‌ಗಳು ಮತ್ತು ಮಹಿಳೆಯರಲ್ಲಿ ಓವರಿಗಳು ಸಂತಾನೋತ್ಪತ್ತಿಗೆ ಅವಶ್ಯಕವಿರುವ ಲೈಂಗಿಕ ಹಾರ್ಮೋನ್‌ಗಳನ್ನು ಉತ್ಪಾದಿಸುತ್ತವೆ ಮತ್ತು ಮಹಿಳೆಯರಲ್ಲಿ ಗರ್ಭಧಾರಣೆ, ಮಗುವಿಕೆ ಜನ್ಮ ನೀಡುವ ಮತ್ತು ಹಾಲೂಡಿಕೆಗೆ ಅಗತ್ಯವಿರುವ ಹಾರ್ಮೋನ್‌ಗಳನ್ನು ಉತ್ಪಾದಿಸುತ್ತವೆ. ಓವರಿಗಳು ಮತ್ತು ಟೆಸ್ಟಿಸ್‌ಗಳಿಂದ ಲೈಂಗಿಕ ಹಾರ್ಮೋನ್‌ಗಳು ಅತ್ಯಂತ ಕಡಿಮೆ ಪ್ರಮಾಣದಲ್ಲಿ ಉತ್ಪನ್ನಗೊಂಡಾಗ, ಪಿಟ್ಯುಟರಿ ಮತ್ತು/ಅಥವಾ ಹೈಪೊಥಲಾಮಸ್‌ನಲ್ಲಿರುವ ಸಮಸ್ಯೆಯನ್ನು ಸೂಚಿಸಿದಂತಾಗುತ್ತದೆ, ಏಕೆಂದರೆ ಈ ಗ್ರಂಥಿಗಳು ಗೊನಾಡ್ ಕ್ರಿಯೆಯನ್ನು ನಿಯಂತ್ರಿಸುತ್ತವೆ. ಅಸಮತೋಲಿತ ಲೈಂಗಿಕ ಹಾರ್ಮೋನ್‌ಗಳ ಉತ್ಪಾದನೆಯಿಂದಾಗಿ ಥೈರಾಯ್ಡ್ ಅಸ್ವಸ್ಥತೆಗಳು ಹಾಗೂ ಇನ್ನಿತರೆ ಅಸ್ವಸ್ಥತೆಗಳು ಕೂಡ ಗೋಚರಿಸುತ್ತವೆ.

**ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ:** ಹಾರ್ಮೋನಲ್ ಅಸಮತೋಲನತೆಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಪರಿಣಾಮಕಾರಿ ಚಿಕಿತ್ಸೆ ನೀಡುತ್ತದೆ. ಹೋಮಿಯೋಪತಿಯು ಹಾರ್ಮೋನಲ್ ಅಸಮತೋಲನತೆಯನ್ನು ಸರಿಪಡಿಸುವಲ್ಲಿ ಸಹಕಾರಿಯಾಗಿದೆ. ನಮ್ಮ ಕಾನ್‌ಸ್ಟಿಟ್ಯೂಷನಲ್ ಹೋಮಿಯೋಪತಿ ವಿಧಾನವು ಜನರಿಗೆ ಚಿಕಿತ್ಸೆ ನೀಡುತ್ತದೆಯೆ ಹೊರತು ಕೇವಲ ತಪಾಸಣೆ ಮಾಡುವುದಿಲ್ಲ. ವೈಯಕ್ತಿಕ ಆರೈಕೆಯು ನಿಮ್ಮ ಹಾರ್ಮೋನಲ್ ಅಸಮತೋಲನತಾ ರೋಗಲಕ್ಷಣಗಳಿಗೆ ಚಿಕಿತ್ಸೆ ನೀಡಲು ನೆರವಾಗುತ್ತದೆ. ರೋಗಲಕ್ಷಣಗಳಿಂದ ಮುಕ್ತರಾಗಲು ಮತ್ತು ನಿಮ್ಮ ಸಮಗ್ರ ಆರೋಗ್ಯ ಸುಧಾರಣೆಗೆ ಹೋಮಿಯೋಪತಿಯು ವಾಸ್ತವಿಕ ಬದಲಾವಣೆಗಳನ್ನು ನೀಡಲು ಸಮರ್ಥವಾಗಿದೆ.

ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಶುಲ್ಕರಹಿತ 1800 108 1212
ಉಚಿತ ಸಮಾಲೋಚನೆ 955 000 1133
www.homeocare.in